

ಮೇಲೆ ಕೆಲಸ ಮಾಡಿದೆ. ಆ ಸಮಯದಲ್ಲಿ, ನನ್ನನ್ನು ನಾನು ಆ ಸಂಕೀರ್ಣ ಚಿಂತನಾ ಪರಂಪರೆಯ ಒಳಗಿನವನೆಂದು ಪರಿಗಣಿಸಿದ್ದೆ. ಆದಾಗ್ಯೂ, 1985ರಲ್ಲಿ ನಾನು ಈ ಸಂಶೋಧನೆಯನ್ನು ಪೂರ್ಣಗೊಳಿಸುವ ಹೊತ್ತಿಗೆ, ಮಾರ್ಕ್ಸ್‌ವಾದದಲ್ಲಿ ಅದರ ಸಂಕೀರ್ಣತೆ ಮತ್ತು ಒಡಗೂಡಿದ ಸಂಪ್ರದಾಯಗಳನ್ನು ನೀವು ಒಪ್ಪಿಕೊಂಡರೂ ಸಹ, ಸುಲಭವಾದ ಪರಿಹಾರವನ್ನು ನೀಡದ ಅಥವಾ ಯಾವುದೇ ಉತ್ತರವನ್ನು ಹೊಂದಿರದ ಹಲವಾರು ಪ್ರಮುಖ ಸಮಸ್ಯೆಗಳಿವೆ ಎಂದು ನಾನು ಭಾವಿಸಿದೆ. ನಂತರ ನಾನು ಉದಾರವಾದಿ ಸಂಪ್ರದಾಯವು ಅದರ ಅಸಂಖ್ಯಾತ ಆವೃತ್ತಿಗಳಲ್ಲಿ ಈ ಸಮಸ್ಯೆಗಳಿಗೆ ಹೇಗೆ ಪ್ರತಿಧ್ವನಿಸಿತು ಎಂಬುದನ್ನು ಕಂಡುಕೊಳ್ಳಲು ಪ್ರಯತ್ನಿಸಿದೆ. ಅದೃಷ್ಟವಶಾತ್, ನನ್ನ ಪಿಎಚ್.ಡಿ ನಂತರ, ನನಗೆ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಫೆಲೋಶಿಪ್ ಸಿಕ್ಕಿತು, ಇದು ಸ್ವಲ್ಪಮಟ್ಟಿಗೆ ಆ ವಿಷಯವನ್ನು ಅಧ್ಯಯನ ಮಾಡಲು ನನಗೆ ಸಹಾಯ ಮಾಡಿತು. ನಾನು ಸಮಾನತಾವಾದಿ ಉದಾರವಾದ ಎಂದು ಕರೆಯಲಾಗುವುದನ್ನು, ವಿಶೇಷವಾಗಿ ಜಾನ್ ರಾಲ್ಸ್ ಅವರ ನಿಕಟ ಅಧ್ಯಯನದ ಮೂಲಕ, ಅರ್ಥಮಾಡಿಕೊಂಡೆ. ಆದರೆ, ಪಾಶ್ಚಿಮಾತ್ಯ ಅಕಡೆಮಿಕ್ ಕ್ಷೇತ್ರದಲ್ಲಿ ರೂಪುಗೊಂಡ ರಾಜಕೀಯ ಸಿದ್ಧಾಂತದ ಮೇಲೆ ನನ್ನ ಶೈಕ್ಷಣಿಕ ಭವಿಷ್ಯವನ್ನು ನಿರ್ಮಿಸುವ ಬದಲು, ರಾಷ್ಟ್ರೀಯತಾವಾದಿ ಸಂಕಥನದ ಸುತ್ತ ಹೆಣೆದ ವಾದವಿವಾದಗಳಲ್ಲಿ ಭಾರತದಲ್ಲಿ ಸಮಾನತಾವಾದಿ ಯೋಜನೆಯು ಹೇಗೆ ಮರು ವ್ಯಾಖ್ಯಾನಿಸಲ್ಪಟ್ಟಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆ. ನನ್ನ ಹಿನ್ನೆಲೆಯ ಕಾಳಜಿಗಳಿಂದಾಗಿ, ನಾನು ಅಂಬೇಡ್ಕರ್‌ರವರ ಬರಹಗಳತ್ತ ಸಾಕಷ್ಟು ಆಕರ್ಷಿತನಾದೆ. ಆದರೆ ಜವಾಹರಲಾಲ್ ನೆಹರೂ ಅವರಂತೆ ಅಂಬೇಡ್ಕರ್ ಸುಲಲಿತವಾದ ಬರಹಗಾರರಲ್ಲ ಎಂಬುದನ್ನು ನಾನು ಅರಿತುಕೊಂಡೆ. ನನಗೆ ಅವರ ರಾಜಕೀಯ ಯೋಜನೆ ಮತ್ತು ಅವರ ಬರಹಗಳ ನಡುವಿನ ಸಮನ್ವಯತೆ ಹಾಗೂ ಉದ್ವಿಗ್ನತೆಯನ್ನು ಗುರುತಿಸುವುದು ಮುಖ್ಯವಾಗಿತ್ತು. ನನ್ನ ಮೊದಲ ಪ್ರಮುಖ ಪ್ರಬಂಧವೆಂದರೆ, ಅಂಬೇಡ್ಕರ್‌ರವರ ಬೌದ್ಧಮತದ ಓದುವಿಕೆ. 1990ರ ದಶಕದಲ್ಲಿ, ನಾನು ಅಂಬೇಡ್ಕರ್‌ರವರ ಬಗ್ಗೆ ಕೆಲಸ ಮಾಡುತ್ತಲೇ ಇದ್ದೆ, ಮತ್ತು 2000ರ ಸುಮಾರಿಗೆ, ಹೊಸದೆಹಲಿಯ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ಅಂಬೇಡ್ಕರ್‌ರವರ ಬೌದ್ಧಿಕ ಇತಿಹಾಸದ ಕರಡನ್ನು ನೀಡಲು ಸಾಧ್ಯವೇ? ಎಂದು ನನ್ನನ್ನು ಕೇಳಿತು. ನಾನು ಆ ಪ್ರಸ್ತಾವನೆಯನ್ನು ಒಪ್ಪಿಕೊಂಡೆನಾದರೂ, ಕೆಲವು ತಿಂಗಳುಗಳ ನಂತರ, ಅವರು ಪ್ರಸ್ತಾವಿತ ಜೀವನಚರಿತ್ರೆಗೆ ಸ್ವಲ್ಪ ಕಾಯಬಹುದು, ಆದರೆ ಅಲ್ಲಿಯವರೆಗೆ ಅಂಬೇಡ್ಕರ್‌ರವರ ಪ್ರಮುಖ ಬರಹಗಳ ಸಂಗ್ರಹವನ್ನು ಪೀಠಿಕೆಯೊದಿಗೆ ನೀಡಬಹುದೇ ಎಂದು ಕೇಳಿತು. ನಾನು ಆ ಸಂಪುಟವನ್ನು ಪೀಠಿಕೆಯೊಂದಿಗೆ ಸಾಕಷ್ಟು ವೇಗವಾಗಿ ಒಟ್ಟುಗೂಡಿಸಿದೆ. ಆ ಸಂಪುಟದಲ್ಲಿ ಕೆಲವು ಸಣ್ಣಪುಟ್ಟ ದೋಷಗಳಿವೆ, ಆದರೆ ಅದನ್ನು ಮರುಪರಿಶೀಲಿಸಲು ನನಗೆ ಸಮಯ ಸಿಕ್ಕಿಲ್ಲ. ಆ ಪುಸ್ತಕವು ಶೈಕ್ಷಣಿಕ ನಿರ್ವಾತವನ್ನು ತುಂಬಿದೆಯೆಂದೆನಿಸುತ್ತದೆ. ಅದರಲ್ಲೂ ವಿಶೇಷವಾಗಿ ಮಧ್ಯಮ ವರ್ಗಕ್ಕೆ ಮತ್ತು ಸಾಮಾಜಿಕ ವಿಜ್ಞಾನಗಳ ಗೊಂದಲಮಯ ಶೈಕ್ಷಣಿಕ ಜಗತ್ತಿನಲ್ಲಿ ನೆಲೆ ಕಂಡುಕೊಳ್ಳಲು ಶ್ರಮಿಸುತ್ತಿರುವ